

ಕಲೆ: ಗಣೇಶ್ ಆಚಾರ್ಯ

ಮಗಳಿದ್ದಳು. ಚೆಲುವೆಯೂ ಬುದ್ಧಿವಂತಳೂ ಆದ ಯುವತಿ. ಮುದುಕ ರೈತನ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಂಡು ಅವಳನ್ನು ಮದುವೆಯಾಗಲು ಸಂಚು ಹೂಡಿದ.

ಅದಕ್ಕೆ ಅವನು ಒಂದು ಸ್ಪರ್ಧೆ ಇಟ್ಟ. ಅವನು ಒಂದು ಚೀಲದಲ್ಲಿ ಎರಡು ಕಲ್ಲುಗಳನ್ನು ಹಾಕುತ್ತಾನೆ – ಒಂದು ಬಿಳಿ ಬಣ್ಣದ್ದಾದರೆ, ಮತ್ತೊಂದು ಕಪ್ಪು ಬಣ್ಣದ್ದು. ಹುಡುಗಿಯ ಕಣ್ಣನ್ನು ಕಟ್ಟಿ, ಅವಳು ಅದರಲ್ಲಿ ಒಂದು ಕಲ್ಲನ್ನು ತೆಗೆಯ ಬೇಕು. ಕಪ್ಪು ಕಲ್ಲನ್ನು ತೆಗೆದರೆ ಅವಳು ಮುದುಕನನ್ನು ಮದುವೆಯಾಗಬೇಕು. ಜೊತೆಗೆ ಸಾಲ ಮನ್ನಾ ಆಗುತ್ತದೆ. ಬಿಳಿ ಕಲ್ಲನ್ನು ತೆಗೆದರೆ ಮದುವೆ ಆಗಬೇಕಿಲ್ಲ ಮತ್ತು ಸಾಲವನ್ನೂ ಕೊಡಬೇಕಿಲ್ಲ! ಒಂದು ವೇಳೆ ಪಂದ್ಯವೇ ಬೇಡವೆಂದಾದರೆ ರೈತ ಜೈಲಿಗೆ ಹೋಗಬೇಕು.

ಇದಕ್ಕೆ ಆ ಹುಡುಗಿ ಒಪ್ಪಿಕೊಂಡಳು. ಆ ಅಡ್ಡಬುದ್ಧಿಯ ಮುದುಕ ಚೀಲಕ್ಕೆ ಎರಡೂ ಕಪ್ಪು ಕಲ್ಲುಗಳನ್ನು ಹಾಕಿದ್ದನ್ನು ಗಮನಿಸಿದಳು. ಈ ಮೋಸವನ್ನು ಉಪಾಯದಿಂದಲೇ ಗೆಲ್ಲಬೇಕೆಂದುಕೊಂಡಳು.

ಯೋಚಿಸಿದಾಗ ಅವಳಿಗೆ ಮೂರು ಉಪಾಯಗಳು ಅವಳಿಗೆ ಹೊಳೆದವು. ಒಂದನೆಯದು – ಮುದುಕನ ಮೋಸವನ್ನು ಕೂಡಲೇ ಬಯಲು ಮಾಡುವುದು. ಹಾಗೆ ಮಾಡಿದರೆ ರೈತ ಪಂದ್ಯಕ್ಕೆ ಒಪ್ಪದೆ ಜೈಲಿಗೆ ಹೋಗಬಹುದು; ಇದು ಅವಳಿಗೆ ಸಮ್ಮತವಲ್ಲ! ಅಲ್ಲದೆ ಮುದುಕ ಬೇರೆ ತರಹ ಹಿಂಸೆ ಕೊಡಬಹುದು.

ತಂದೆಗಾಗಿ ಮುದುಕನನ್ನು ಮದುವೆಯಾಗುವುದು ಎರಡನೆಯ ದಾರಿ. ಆದರೆ ಹುಡುಗಿ ಬುದ್ಧಿವಂತೆ; ತಂತ್ರವನ್ನು ತಂತ್ರದಿಂದಲೇ ಗೆಲ್ಲಲು ನಿರ್ಧಾರ ಮಾಡಿದಳು. ಕಣ್ಣು ಮುಚ್ಚಿಕೊಂಡು ಚೀಲದಲ್ಲಿ ಕೈಹಾಕಿ ಒಂದು ಕಲ್ಲನ್ನು ತೆಗೆದವಳು ಅದನ್ನು 'ಕೈ ಜಾರಿ! (?)' ಕೆಳಗೆ ಬೀಳಿಸಿ ಬಿಟ್ಟಳು. ಅದು ರಸ್ತೆಯಲ್ಲಿದ್ದ ಇತರ ಕಲ್ಲುಗಳಲ್ಲಿ ಬೆರೆತು ಹೋಯಿತು. ಅದರ ಬಣ್ಣ ಗುರುತಿಸುವುದು ಅಸಾಧ್ಯವಾಯಿತು.

ಹುಡುಗಿ ತನ್ನ ಅಜಾಗ್ರತೆ(!)ಗೆ ಕ್ಷಮೆ ಕೇಳುತ್ತ ಹೇಳಿದಳು, 'ಚೀಲದಲ್ಲಿ ಉಳಿದಿರುವ ಕಲ್ಲನ್ನು ನೋಡಿದರೆ ಕೆಳಗೆ ಬಿದ್ದ ಕಲ್ಲು ಬೇರೆ ಬಣ್ಣದ್ದೆಂದು ಗೊತ್ತಾಗುತ್ತೆ! ಚೀಲದಲ್ಲಿ ಬಿಳಿ ಕಲ್ಲಿದ್ದರೆ ನಾನು ತೆಗೆದದ್ದು ಕಪ್ಪು ಕಲ್ಲು; ಇಲ್ಲವೇ ಚೀಲದಲ್ಲಿ ಕಪ್ಪು ಬಣ್ಣದ ಕಲ್ಲು ಇದ್ದಲ್ಲಿ ನಾನು ತೆಗೆದದ್ದು ಬಿಳಿ ಬಣ್ಣದ್ದೇ ಆಗಿರಬೇಕಲ್ಲ!' ಎಂದು ವಿವರಿಸಿದಳು.

ಮುದುಕನ ಸ್ಥಿತಿ 'ಕಳ್ಳನಿಗೆ ಚೇಳು ಕುಟುಕಿದಂತೆ' ಎಂಬ ನುಡಿಗಟ್ಟಿಗೆ ಒಳ್ಳೆಯ ಉದಾಹರಣೆ ಆಯಿತು! ತನ್ನ ಮೋಸವನ್ನು ಅವನು ಹೊರಗೆ ಹೇಳುವಂತಿರಲಿಲ್ಲ! ಹಣವೂ ವಾಪಸ್ ಬರಲಿಲ್ಲ; ಹುಡುಗಿಯೂ ಕೈ ತಪ್ಪಿ ಹೋದಳು!

(ಚೀನೀ ಜನಪದ ಕತೆ)